


ತೂರಿಸಿ ವಿಜಯದ ನಗೆ ಬೀರಿದ್ದನ್ನು ನಾನು ನೋಡಿದ್ದೆ. ವಸ್ತುಗಳ ಸ್ಥಿತಿಸ್ಥಾಪಕ ಗುಣದಂತೆ ಸೀಟಿನ ಕೆಳಗೆ ಹೋದ ನಂತರ ಬ್ಯಾಗು ಪುನಃ ಊದಿಕೊಂಡದ್ದರಿಂದ ಹೊರಗೆ ಬರಲು ನಿರಾಕರಿಸುತ್ತಿತ್ತು. ಪಕ್ಕದಲ್ಲಿದ್ದ ಅವನ ಮಡದಿಯೂ ಬ್ಯಾಗನ್ನು ತೆಗೆಯಲು ಯತ್ನಿಸಿ ವಿಫಲಲಾದಳು. ಅವರು ಇಳಿಯಬೇಕಾಗಿದ್ದ ನಿಲ್ದಾಣ ಹತ್ತಿರವಾಗುತ್ತಿದ್ದಂತೆ ಇಬ್ಬರೂ ಅಸಹಾಯಕತೆಯಿಂದ ಚಡಪಡಿಸತೊಡಗಿದರು. ನಿನ್ನೆ ಬ್ಯಾಗನ್ನು ಸೀಟಿನ ಕೆಳಗೆ ಇಡುವಂತೆ ಸೂಚಿಸಿದ್ದ ಯುವಕನ ಹೆಂಡತಿಯೇ ಯಾಕೆ ಅಲ್ಲಿ ಇಟ್ಟದ್ದು ಎಂದು ಗಂಡನಿಗೆ ಬೈಯತೊಡಗಿದಳು. ಆಗ ನನಗೊಂದು ಉಪಾಯ ಹೊಳೆಯಿತು. ಕೈಗೆ ಸಿಗುವಂತಿದ್ದ ಬ್ಯಾಗಿನ ಝಿಪ್ ತೆರೆದು ಕೆಲವು ಬಟ್ಟೆಗಳನ್ನು ಹೊರ ತೆಗೆಯಿರಿ ಎಂಬ ಸಲಹೆ ನೀಡಿದೆ. ಹಾಗೆ ಮಾಡಿದಾಗ ಬ್ಯಾಗು ಸಲೀಸಾಗಿ ಹೊರಗೆ ಬಂತು. ನಿಲ್ದಾಣವೂ ಬಂತು. ದಂಪತಿ ನನಗೆ ಥ್ಯಾಂಕ್ಸ್ ಹೇಳಿ ಇಳಿದು ಹೋದರು. ಬರೆಯುವಾಗ ಮಾತ್ರ ಉಪಯೋಗಕ್ಕೆ ಬರುತ್ತಿದ್ದ ನನ್ನ ಅಡ್ಡ ಯೋಚನೆಯಿಂದ ಅಂದು ಆ ದಂಪತಿಗೆ ಪ್ರಯೋಜನವಾದದ್ದನ್ನು ಕಂಡು ನನ್ನ ಮಡದಿಯೂ ನನ್ನತ್ತ ಮೆಚ್ಚುಗೆಯ ನೋಟ ಬೀರಿದಳು.

2016ರ ನವೆಂಬರ್ 8ರಂದು ನೋಟ್ ಅಮಾನ್ಯ ಆದಾಗ ಯಾರಿಗೂ ಅದರ ಪೂರ್ವ ಸೂಚನೆ ಸಿಕ್ಕಿರಲಿಲ್ಲ. ಆ ರಹಸ್ಯ ಬಯಲಾಗದೆ ಉಳಿದದ್ದು ಹೇಗೆ? ಎಂದು ಯೋಚಿಸಿದಾಗ ನನಗೆ ಹೊಳೆದ ಕಾರಣ ಇಲ್ಲಿದೆ:

**ಸ್ವಲ್ಪವೂ ಸುಳಿವು ನೀಡದೆ**
**ಐನೂರು, ಸಾವಿರದ ನೋಟು**
**ರದ್ದು ಮಾಡಿದರು ಮೋದಿ**
**ಗುಟ್ಟು ರಟ್ಟಾಗದಿರಲು**
**ಕಾರಣ ಅವರ**
**ಮನೆಯಲ್ಲಿ ಇಲ್ಲ ಮಡದಿ!**

ಈ ಹನಿಗವನ ಪ್ರಕಟವಾದ ಹಲವು ದಿನಗಳ ನಂತರ ನೋಟು ಅಮಾನ್ಯಕ್ಕೆ ಸಂಬಂಧಿಸಿದ ಎಲ್ಲಾ ಸಭೆಗಳೂ ಪ್ರಧಾನಿಯವರ ನಿವಾಸದಲ್ಲೇ ನಡೆದಿತ್ತು ಎಂಬ ಸುದ್ದಿಯನ್ನು ಓದಿದಾಗ ನನಗೆ ಅಚ್ಚರಿಯಾಯಿತು. ನಾನು ತಮಾಷೆಗೆಂದು ವಕ್ರಾಲೋಚನೆ ಮಾಡಿ ಬರೆದದ್ದು ನಿಜವೇ ಆಗಿತ್ತು.

●